(ಇಂದು ದಿನಾಂಕಃ 10-09-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

(ಸಾಕ್ಷಿದಾರರು ಕೊಂಕಣಿ ಭಾಷೆ ಮಾತನಾಡುವವರಾಗಿದ್ದು, ವಕೀಲರಾಗಿರುವ ಮಿಸ್ ಡಿ.ಡಿ.ಕೆ. ರವರನ್ನು ಭಾಷಾಂತರ ಮಾಡಲು ನೇಮಿಸಿಕೊಳ್ಳಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ನಂ.1 ರಿಂದ 5 ರವರ ಪರಃ ಶ್ರೀ ಎನ್.ಎಂ.ಎಂ. ವಕೀಲರಿಂದಃ**

ನಾನು ದ್ವಿತೀಯ ಪಿ.ಯು.ಸಿ. ಓದಿದ್ದೇನೆ. ನಮ್ಮ ತಂದೆಯ ಮನೆ ಕೋಡಿಭಾಗದಲ್ಲಿ ಇದೆ. ನಾನು ನನ್ನ ಗಂಡನ ಹಕ್ಕಿಗಾಗಿ ಈ ದಾವೆಯನ್ನು ಹಾಕಿದ್ದೇನೆ. ನನ್ನ ಮದುವೆ 1995 ರಲ್ಲಿ ಆಗಿದೆ. ನನ್ನ ಮದುವೆ ಮೊದಲು ನೋಂದಣಾಧಿಕಾರಿಗಳ ಕಚೇರಿಯಲ್ಲಿ ಆಗಿದೆ, ಆನಂತರ ನಮ್ಮ ತಂದೆಯ ಮನೆಯ ಮುಂದೆ ಮದುವೆಯಾಗಿದೆ. ನನ್ನ ಮದುವೆಗೆ ನನ್ನ ಗಂಡನ ಮನೆಯ ಕಡೆಯಿಂದ 2 ಟೆಂಪೊದಲ್ಲಿ ಜನ ಬಂದಿದ್ದರು. ನನ್ನ ಗಂಡನ ಹೆಸರಿನಲ್ಲಿ ಜಮೀನು ಇದೆ ಎಂದು ನನ್ನ ಗಂಡನ ತಂದೆ ತುಕಾರಾಮ ಹೇಳಿದ್ದಾರೆ. 2005 ರಲ್ಲಿ ನನ್ನ ಗಂಡನ ತಂದೆ ಮೃತಪಟ್ಟಿದ್ದಾರೆ. ನನ್ನ ಗಂಡನಿಗೆ 4 ಜನ ಸಹೋದರರು ಮತ್ತು ಒಬ್ಬರು ಸಹೋದರಿ ಇದ್ದಾರೆ. ಸದರಿಯವರ ಮದುವೆ ಆಗಿದೆ. ನನ್ನ ಗಂಡ ಅವರ ತಂದೆಗೆ 3 ನೇ ಮಗ. ಮದುವೆಯಾದ ನಂತರ ನಾನು ನನ್ನ ಗಂಡ ಮತ್ತು ನನ್ನ ಅತ್ತೆ - ಮಾವ ಒಟ್ಟಿಗೆ ವಾಸವಾಗಿದ್ದೆವು. ಇನ್ನುಳಿದವರು ಬೇರೆ ಬೇರೆ ಕಡೆಗೆ ವಾಸವಾಗಿದ್ದರು. ಈಗ ನಾನು ಕೋಡಿಭಾಗದಲ್ಲಿ ವಾಸವಾಗಿದ್ದೇನೆ. ನಾನು ಕೋಡಿಭಾಗದಲ್ಲಿ ವಾಸವಾಗಿ ಸುಮಾರು 20 ವರ್ಷ ಮೇಲ್ಪಟ್ಟಾಗಿದೆ. ನನ್ನ ಮಗನ ಹೆಸರು ವಿಶ್ವನಾಥ. ನನ್ನ ಮಗನಿಗೆ ಈಗ 32 ವರ್ಷ ವಯಸ್ಸಾಗಿದೆ. ಅವನಿಗೆ ಮದುವೆಯಾಗಿಲ್ಲ. 2 ನೇ ವಾದಿ ಈಗ ಮುಂಬೈನಲ್ಲಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. 2 ನೇ ವಾದಿ ಜನನಿಸಿದ ನಂತರದಲ್ಲಿ ನಾನು ಕೋಡಿಭಾಗದಲ್ಲಿ ವಾಸವಾಗಿದ್ದೇನೆ. ಕೋಡಿಭಾಗದಲ್ಲಿ ನಾನು ನನ್ನ ತಾಯಿಯ ಮನೆಯಲ್ಲಿ ವಾಸವಾಗಿದ್ದೇನೆ. ನನಗೆ ಸಹೋದರರು ಇದ್ದಾರೆ. ನಾನು ಮತ್ತು ನನ್ನ ಸಹೋದರರು ಒಂದೇ ಕಂಪೌಂಡಿನಲ್ಲಿ ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದೇವೆ.

-10- ಅ. ದಾ. ನಂ. 1/2024
ಪಿ.ಡಬ್ಲ್ಯು. 1

ಈ ದಾವೆಯನ್ನು ಹಾಕಲು ವಕೀಲರಿಗೆ ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆ, ಸಾಕ್ಷಿ ಮುಂದುವರಿದು ದಾಖಲಾತಿಗಳಲ್ಲಿ ನನ್ನ ಹೆಸರು ಇಲ್ಲದ್ದರಿಂದ ಮಾಹಿತಿ ಕೊಟ್ಟಿದ್ದೇನೆ. ದಾವೆಯನ್ನು ಹಾಕುವ ಒಂದು ತಿಂಗಳ ಮೊದಲು ದಾಖಲಾತಿಗಳಲ್ಲಿ ನನ್ನ ಹೆಸರು ಇಲ್ಲ ಎಂದು ತಿಳಿದು ಬಂದಿದೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ